MYSORE LEGISLATIVE ASSEMBLY

TWENTIETH DAY

Saturday, 13th March 1954

The House met in the Legislative Assembly Hall, Old Public Offices, Bangalore, at Thirty Minutes past Eight of the Clock.

Mr. DEPUTY SPEAKER (Sri R.CHANNIGARAMIAH) in the Chair.

QUESTIONS AND ANSWERS.

Distress Relief Measures.

(Action taken on the Rama Murthy Committee Report.)

Q.—218. Sri H. C. LINGA REDDY (Malur).—

Will the Government be pleased to state :—

(*a*) whether a Committee under the leadership of Sri S. V. Rama Murthy had been deputed by the Central Government to concert permanent relief measures in the famine affected areas of the State;

(*b*) the places visited by them;

(*c*) the recommendations made by the Committee;

(*d*) whether a copy of their recommendations will be made available to the members of this House;

(*e*) the recommendations approved by the Central Government;

(*f*) the action taken thereon by the State Government up to this day since the time of submission of the report?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) The team visited some of the areas of Kolar, Tumkur and Chitaldrug on 4th, 5th and 6th November 1952 and Lakkavalli and Tunga Project areas on the 8th and 9th November 1952.

(*c*) and (*d*) A copy of the report of Sri Rama Murthy Committee is placed on the Table of the House. (Copy placed in the library, *vide* No. 14/L. A. of 1954.)

(*e*) (1) A loan of Rs. 1 lakh for expenditure during 1952-53 was sanctioned in Government of India letter No. F. 14-8/52—GMF (*a*), dated 20th/21st March 1953 for (i) New tank at Kenchanakere in Mysore District and (ii) Construction of an anicut across Vedavathi.

(2) The Ministry of Food and Agriculture, Government of India, have further agreed, in the light of their general policy, to bear the following items as grants and loans to the extent noted below :

(i) Half the cost of the following items as grant subject to a ceiling of Rs. 4 lakhs :—

		Rs. in lakhs
Gruel Centres	...	2·00
Gratuitous Relief	...	1·00
Concessional Fodder	...	5·00
		8·00

(ii) A loan subject to ceiling of Rs. 42·00 lakhs for the following items :—

		Rs. in lakhs
Distress Relief Works.	...	60·00
Minor Irrigation Works.	...	25·00
		85·00

(3) The Secretary, Planning Commission, has also intimated that the Government of India are prepared to assist by way of loan, Rs. 3·00 crores for the completion of the first stage of the Bhadra Reservoir and Rs. 50.00 lakhs for the completion of the Nugu Reservoir during the period of the plan.

(SRI KADIDAL MANJAPPA.)

(*f*) (1) The Anicut works of Vedavathi have been started and the works are in good progress.

(2) The estimate for the new tank at Kenchanakere has been sanctioned and the works are arranged to be started.

(3) The post of the Special Chief Engineer has been revived and several Executive Divisions formed for rapidly executing the Bhadra Reservoir Works.

(4) The programme of expenditure for the Nugu Reservoir Works is stepped up from Rs. 20·00 to Rs. 40·00 lakhs.

(5) A programme of Rs. 85·00 lakhs has been sent to Government of India. The Ministry of Food and Agriculture, Government of India, have replied that the question of granting financial assistance to the State is under their consideration and that a final reply would be made shortly.

Sri H. C. LINGA REDDY.—It is said that 'a copy of the report is placed on the Table of the House.' Is it not possible for Government to have copies printed and distributed amongst the members of this House ?

Sri Kadidal MANJAPPA.—I do not think there is any need for that. Any Hon'ble Member can look into the copy of the report placed on the Table.

Sri H. C. LINGA REDDY.—Is it true that the works have been selected mostly in the non-scarcity areas of the State ?

Sri Kadidal MANJAPPA.—No. In fact, the report of the Committee is in favour of helping people in distress areas.

Sri H. C. LINGA REDDY.—My question is whether it is a fact that most of the works for which heavy amounts have been allotted, have been selected in non-scarcity areas of the State ?

Sri Kadidal MANJAPPA.—No. For instance, if I may say so, Lakkavalli Reservoir helps scarcity areas in Chitaldrug District. No doubt Nugu is not strictly speaking a scarcity area, but that is not meant to give relief to distress areas.

Sri H. C. LINGA REDDY.—What is the total amount of grant that has been made available apart from the loans that have been recommended ?

Sri Kadidal MANJAPPA.—Apart from the figures I have given in the answer, there is no other amount given as grant.

Sri H. C. LINGA REDDY.—What are the various works that have been selected in the Kolar District as per the report ?

Sri Kadidal MANJAPPA.—The report is there.

Sri H. C. LINGA REDDY.—That is why I made a request that if possible copies of it may be made available to the members.

Sri Kadidal MANJAPPA.—There is no need for copies to be printed and published.

Sri H. C. LINGA REDDY.—Has the Committee recommended that the work of Tirumani in Kolar District should be taken up ?

Sri Kadidal MANJAPPA.—I think so.

Sri H. C. LINGA REDDY.—What is the action taken ?

Sri Kadidal MANJAPPA.—That is engaging the attention of the Government. We have addressed the Andhra Government.

Sri H. C. LINGA REDDY.—Out of the amount that has been made available for Gruel Centres, Gratuitous Relief and Concessional Fodder *viz.*, Rs. 8 lakhs, what is the amount that has been actually drawn from the Government of India ?

Sri Kadidal MANJAPPA.—I want notice please.

Sri H. C. LINGA REDDY.—Has the Committee recommended that cottage industries should be started as a measure of relief in the scarcity areas ?

Sri Kadidal MANJAPPA.—That is one of the recommendations.

Sri H. C. LINGA REDDY.—What are the industries that have been recommended ?

Sri Kadidal MANJAPPA.—I think my Hon'ble friend has not looked into the report.

Mr. DEPUTY SPEAKER.—The report is placed on the Table of the House.

Sri H. C. LINGA REDDY.—What is the action taken on the various recommendations made with regard to industries ?

Mr. DEPUTY SPEAKER.—It is a matter of detail.

Sri H. C. LINGA REDDY.—Has the Committee recommended that irrigational facilities by way of supply of electricity should be extended in scarcity areas on a very large scale ?

Sri Kadidal MANJAPPA.—Yes.

Sri H. C. LINGA REDDY.—What is the action taken ?

Sri Kadidal MANJAPPA.—As the Hon'ble Member knows, we have been given a loan of Rs. 50 lakhs and that amount has been distributed among the distress districts.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾತ್ಕಾಲಿಕವಾದಂಥ ಪರಿಹಾರಗಳ ಸೂಚನೆ ಕೊಟ್ಟಿರುವುದರ ಜೊತೆಗೆ ಶಾಶ್ವತವಾಗಿ ಕ್ಷಾಮನಿವಾರಣೆಗೆ ಮಾಡಬೇಕಾದ ಸಲಹೆಗಳೂ ರಿಪೋರ್ಟಿನಲ್ಲಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.— ಅವುಗಳಲ್ಲಿ ಲಕ್ಕವಳ್ಳಿ ಮತ್ತು ನುಗು ಪ್ರಾಜೆಕ್ಟುಗಳು ಸೇರಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಲಕ್ಕವಳ್ಳಿ ಸೇರಿದೆ. ನುಗು ಕೂಡ ಶಾಶ್ವತವಾದ ಪರಿಹಾರವೆಂದು ಪರಿಗಣಿಸಲ್ಪಟ್ಟಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇತರ ಯಾವ ಯಾವ ದೊಡ್ಡ ಕಾಮಗಾರಿಗಳು ಸೇರಿವೆಯೆಂಬುದನ್ನೂ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಕಾಮಗಾರಿಗಳೇ ಅಲ್ಲದೆ ರಾಮಮೂರ್ತಿ ಕಮಿಟಿಯ ವರದಿಯ ಪ್ರಕಾರ ಬೇರೆ ಕಾಮಗಾರಿಗಳಿಗೆ ಧನ ಸಹಾಯವನ್ನೂ ಒದಗಿಸಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.— ಈ 80 ಲಕ್ಷ ರೂಪಾಯಿಗಳನ್ನು ಒದಗಿಸಿರುವುದರ ಬಗ್ಗೆ ವಿವರಗಳನ್ನು ಈ ಸಭೆಗೆ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.— ಇಲ್ಲಿ ಕೊಟ್ಟಿರುವುದರಲ್ಲಿ ಸ್ವಲ್ಪ ತಪ್ಪಿದೆ. A loan subject to ceiling of Rs. 42 lakhs ಎಂದು ಹೇಳಿದೆ. ಆ ರೀತಿ ಅಲ್ಲ. 42 ಲಕ್ಷ ರೂಪಾಯಿಗಳನ್ನು ಅವರು ಸಾಲ ಕೊಟ್ಟರೆ ನಾವು 42 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು, ಈ ಆಧಾರದಮೇಲೆ 42 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅವರು ಕೊಡುವ ಮೊಬಲಗನ್ನು irrigation worksಗೆ ಮತ್ತು ರಸ್ತೆಗಳಿಗೆ ಕ್ಷಾಮಪೀಡಿತ ಪ್ರದೇಶಗಳಲ್ಲಿ ಖರ್ಚುಮಾಡಬೇಕೆಂದು ಸರ್ಕಾರದವರ ಅಭಿಪ್ರಾಯ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.— ಹಾಗಾದರೆ ತಾವು 42 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿಕೊಂಡು ಕಟ್ಟಕಡೆಯದಾಗಿ ಇಂಡಿಯಾ ಸರ್ಕಾರದವರಿಗೆ ತಿಳಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—42 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿಕೊಂಡಿಲ್ಲ, ಕಡಮೆ ಮೊಬಲಗನ್ನು ಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.— ಒಟ್ಟು ಈ ಯೋಜನೆಗೆ ಬೇಕಾದ 42 ಲಕ್ಷ ರೂಪಾಯಿಗಳನ್ನು ನಾವು ಕೊಡುವುದಕ್ಕೆ ಸಾಧ್ಯ ಎಂದಾದರೂ ತಿಳಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.— ನಾವು 25 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.— ಹಾಗಾದರೆ ಅವರು ಕೊಡುವ 42 ಲಕ್ಷ ರೂಪಾಯಿಗಳ ಜೊತೆಗೆ ಮೈಸೂರು ಸರ್ಕಾರದವರೂ 42 ಲಕ್ಷ ರೂಪಾಯಿಗಳನ್ನು ಕೊಡದೆ ಹೋದರೆ, ಅವರು ಇದನ್ನು ಒಪ್ಪಿಕೊಳ್ಳುವುದಿಲ್ಲವೆಂದು ಹೇಳಿಲ್ಲವೇ ?

Sri Kadidal MANJAPPA.—The matter is under correspondence. ಆರೀತಿ ಅವರು ತಿಳಿಸಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗಾದರೆ ಈ ಯೋಜನೆ ಇನ್ನೂ ವ್ಯವಹಾರದಲ್ಲಿಯೇ ಇದೆ, ಯಾವುದೂ ಆಖೈರು ತೀರ್ಮಾನಕ್ಕೆ ಬಂದಿಲ್ಲವೆಂದು ಭಾವಿಸೋಣವೇ ?

ಶ್ರೀ ಕಡಿದಾಳ್ ಮಂಜಪ್ಪ.— ಇದಕ್ಕೆ ಸಂಬಂಧಪಟ್ಟ ಯೋಜನೆಗಳನ್ನೆಲ್ಲಾ ತಯಾರುಮಾಡಿ ಅವರಿಗೆ ಕಳುಹಿಸಿದ್ದೇವೆ. ಈ ಅಭಾವ ಪ್ರದೇಶಗಳಲ್ಲಿ ಯಾವ ಯಾವ ಕೆರೆಗಳನ್ನು ದುರಸ್ತುಮಾಡಬೇಕು, ಯಾವ ಯಾವ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಪಟ್ಟಿಮಾಡಿ ಕಳುಹಿಸಿದ್ದೇವೆ. ಆದರೆ, ಬಡ್ಡಿ ಮತ್ತು ಅಂತಿಮವಾಗಿ ಅವರು ಕೊಡತಕ್ಕ ಹಣ ಎಷ್ಟೆಂಬುದರ ಬಗ್ಗೆ ಪತ್ರವ್ಯವಹಾರ ಇನ್ನೂ ನಡೆಯುತ್ತಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.— ಈ ಕಾಮಗಾರಿಗಳ ಪಟ್ಟಿಯನ್ನು ನಥೆಯ ಗಮನಕ್ಕೆ ತರುವುದಕ್ಕೆ ಸಾಧ್ಯವೇ ?

Sri Kadidal MANJAPPA.—It is a big list ; any Hon'ble Member can come to me and ascertain the items.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಥೆಯ ಮುಂದಾದರೂ ಇಡುವುದಕ್ಕೆ ಪ್ರಯತ್ನಮಾಡುತ್ತೀರಾ ?

Mr. DEPUTY SPEAKER.—I think he can do that.

ಶ್ರೀ ಎಸ್. ಗೋಪಾಲಗೌಡ.—ಶಾಶ್ವತವಾದ ಪರಿಹಾರಗಳನ್ನು ಒದಗಿಸಿಕೊಡುವ ನಿರ್ದಿಷ್ಟವಾಗಿ ಗ್ರಾಮ ಅಥವಾ ಜಿಲ್ಲೆಯನ್ನು ಯೂನಿಟ್ಟಾಗಿಟ್ಟುಕೊಂಡಿದ್ದೀರಾ ? ಯಾವ ಪ್ರದೇಶಗಳು ಕ್ಷಾಮಕ್ಕೆ ಪದೇ ಪದೇ ತುತ್ತಾಗುತ್ತಿವೆಯೋ ಅಲ್ಲಿಗೆ ಈ ಪರಿಹಾರಗಳನ್ನು ಒದಗಿಸಿಕೊಡುವುದರಲ್ಲಿ ಗ್ರಾಮವನ್ನೋ ಅಥವಾ ಜಿಲ್ಲೆಯನ್ನೋ ಪ್ರಾದೇಶಿಕವಾಗಿ ಯಾವುದನ್ನು ಚುನಾಯಿಸಿಕೊಂಡು ಮಾಡುತ್ತಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ತಾಲ್ಲೂಕನ್ನು ಒಂದು ಪ್ರಾದೇಶಿಕ ಯೂನಿಟ್ಟಾಗಿ ತೆಗೆದುಕೊಂಡಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಏಕೆಂದರೆ, ಈಗ ನೀವು ಭದ್ರಾ, ನುಗು ಇವೆಲ್ಲವೂ ಶಾಶ್ವತವಾದ ಪರಿಹಾರದ ಅಂಶಗಳೆಂದು ಹೇಳಿದ್ದೀರಿ. ಭದ್ರಾ ಮತ್ತು ನುಗುಪಿನಿಂದ ಕೋಲಾರಕ್ಕೇನು ಪ್ರಯೋಜನವಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಭದ್ರಾ ಮತ್ತು ನುಗು ಪ್ರಾಜೆಕ್ಟ್‌ಗಳು ಆಗಾಗ್ಗೆ ಕ್ಷಾಮಕ್ಕೆ ಶುತ್ತಾಗುತ್ತಿರುವ ಚಿತ್ರದುರ್ಗ—ತುಮಕೂರು ಡಿಸ್ಟ್ರಿಕ್ಟಿನ ಭಾಗಗಳಿಗೆ ಅನುಕೂಲವಾಗುತ್ತವೆ.

ಶ್ರೀ ಎ. ಮುನಿಯಪ್ಪ.—ರಾಮಮೂರ್ತಿ ಕಮಿಟಿಯವರು ಯಾವ ಯಾವ ಸ್ಥಳಗಳಿಗೆ ಹೋದರು ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಎ. ಮುನಿಯಪ್ಪ.—ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿರುವ ಶ್ರೀನಿವಾಸಸಾಗರದ ಕೆರೆಯ ಕಟ್ಟಡದ ಕೆಲಸವು ಈ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.— ಸೇರಿದೆ.

ಶ್ರೀ ಎ. ಮುನಿಯಪ್ಪ.—ಅದರ ವಿವರಗಳೇನು ತಿಳಿಸುವಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಎ. ಮುನಿಯಪ್ಪ.—ರಾಮಮೂರ್ತಿ ಸಮಿತಿಯವರು ಇದರ ಬಗ್ಗೆ ಏನೆಂದು ಶಿಫಾರ್ಸು ಮಾಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಈ ಕೆಲಸವನ್ನು ಕಾರ್ಯಗತಮಾಡುವುದು ಒಳ್ಳೆಯದೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಅದರಂತೆ ಅದನ್ನು ಜಾಗ್ರತೆ ಕಾರ್ಯಗತ ಮಾಡಲು ಕೈಗೊಳ್ಳುತ್ತೇವೆ.

ಶ್ರೀ ಎ. ಮುನಿಯಪ್ಪ.—ಹೋದವರ್ಷದ ಬಡ್ಜೆಟ್ಟಿನಲ್ಲಿ ಈ ಕೆಲಸಕ್ಕಾಗಿ ತಾವು ಹಣವನ್ನೇನಾದರೂ ತೆಗೆದಿಟ್ಟಿದ್ದಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ತೆಗೆದಿಟ್ಟಿದ್ದಾರೆ.

ಶ್ರೀ ಎ. ಮುನಿಯಪ್ಪ.—ಹಾಗಿದ್ದರೆ ಆ ಮೊಬಲಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಅದೆಲ್ಲಾ ಈಗ ನನಗೆ ಜ್ಞಾಪಕವಿಲ್ಲ. ಅಂಥಾ ದುಡ್ಡನ್ನು ತೆಗೆದಿಡಲಾಗಿತ್ತು.

ಶ್ರೀ ಎ. ಮುನಿಯಪ್ಪ.— ಹೋಗಲಿ. ಈ ವರ್ಷವಾದರೂ ಈ ಕೆಲಸವನ್ನು ಮಾಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿಸುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಈಗ ಮೈನೂರು ದೇಶದಲ್ಲಿ ಕ್ಷಾಮ ತಕ್ಕಮಟ್ಟಿಗಾದರೂ ನಿಂತಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಲವುಕಡೆ ತಕ್ಕಮಟ್ಟಿಗೆ ನಿಂತಿದೆ.

ಶ್ರೀ ವಿ. ಆರ್. ನಾಯ್ಡು.—ಆದರೂ ತಮಗಿನ್ನೂ ಆ ಕ್ಷಾಮದ ಭೀತಿ ನಿಂತಂತೆ ಕಾಣುವುದಿಲ್ಲವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆಲ್ಲಾ ತಮ್ಮಂಥವರ ಆಶೀರ್ವಾದಬೇಕು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಆ ರಾಮಮೂರ್ತಿ ಸಮಿತಿಯವರು ಗೋರಿಬಿದನೂರಿನಲ್ಲಿ ಒಂದು ಸಕ್ಕರೆ ಕಾರ್ಖಾನೆ ಏರ್ಪಡಿಸತಕ್ಕ ಬಗ್ಗೆ ಏನು ಸಲಹೆ ಮಾಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.— ಆ ರಿಪೋರ್ಟನ್ನು ನೋಡಬೇಕಾಗಿರುವುದರಿಂದ ನೋಟೀಸ್ ಬೇಕು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಈಗ ಕೇಂದ್ರ ಸರ್ಕಾರದವರು ದಕ್ಷಿಣ ಇಂಡಿಯಾದಲ್ಲಿ ಆರು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಆ ಪೈಕಿ ಒಂದನ್ನಾದರೂ ನಮ್ಮ ಗೋರಿಬಿದನೂರಿನಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಂಡಿಯಾ ಸರ್ಕಾರದವರು ಹಾಗೆ ಅನುಮತಿಕೊಟ್ಟರೆ ಕೊಡುತ್ತೇವೆ.

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ಈ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪಾಂಚವಾರ್ಷಿಕ ಯೋಜನೆಯ ಬಗ್ಗೆ ಎಷ್ಟು ಕೆರೆಗಳು ಸೇರಿರುತ್ತವೆ ?

Sri Kadidal MANJAPPA.—How does it arise out of this question ?

ಶ್ರೀ ಪಿ. ಆರ್. ರಾಮಯ್ಯ.—ಬೆಂಗಳೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಹಾಗೆ ಆ ಸಮಿತಿಯವರೇನು ಶಿಫಾರ್ಸುಮಾಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ತಿಳಿದಂತೆ ಅವರೇನೂ ಶಿಫಾರ್ಸು ಮಾಡಿದಂತೆ ಕಂಡುಬರುವುದಿಲ್ಲ.

ಶ್ರೀ ಬಿ. ರಾಚಯ್ಯ.—ಅನಾವೃಷ್ಟಿ-ಅನಾರೋಗ್ಯ ಪ್ರದೇಶಗಳಿಗೆ ನಲಹೆಗಳನ್ನು ನೀಡುತ್ತಿರುವಂತೆಯೇ ಆ ಸಮಿತಿಯವರು ಈ ಅತಿವೃಷ್ಟಿ ಪ್ರದೇಶಗಳಿಗೇನಾದರೂ ನಲಹೆ ನೀಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅತಿವೃಷ್ಟಿ ಪ್ರದೇಶಗಳಿಗೂ ಸೂಕ್ತ ಪರಿಹಾರಗಳನ್ನು ನೀಡಬೇಕೆಂಬುದಾಗಿ ಸೂಚನೆ ಇತ್ತಿದ್ದಾರೆ. ಸರ್ಕಾರದವರು ಸಹ ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ; ಕೈಗೊಳ್ಳುತ್ತಲೇ ಇದ್ದಾರೆ.

ಶ್ರೀ ಜಿ. ಶಿವಪ್ಪ.—ಆ ರಾಮಮೂರ್ತಿ ಸಮಿತಿಯವರು ಬೆಂಗಳೂರು—ಬಳ್ಳಾರಿ ರೈಲು ಹಾಕುವ ವಿಚಾರದಲ್ಲಿ ಏನು ಹೇಳಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದರಲ್ಲ ಬಳ್ಳಾರಿ ವಿಚಾರವೇನೂ ಬಂದಂತೆ ಕಾಣುವುದಿಲ್ಲ.

ಶ್ರೀ ಬಿ. ವೈ. ನೀಲೇಗೌಡ.—ಮಂಡ್ಯ ಜಿಲ್ಲೆಯಲ್ಲೂ ಸಹ ಕ್ಷಾಮ ಸರಿಸ್ಥಿತಿ ಇದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಂಡ್ಯ ಜಿಲ್ಲೆ ಕ್ಷಾಮಕ್ಕೇನೂ ಈಡಾಗಿಲ್ಲವಲ್ಲ ?

ಶ್ರೀ ಬಿ. ವೈ. ನೀಲೇಗೌಡ.—ಆಗಾಗ್ಗೆ ಅಲ್ಲಿ ಕೂಡ ಕೆಲವು ಪ್ರದೇಶಗಳು ಕ್ಷಾಮಕ್ಕೀಡಾಗುತ್ತಿರುವುದರಿಂದ ಏನು ಸಲಹೆ ಅಲ್ಲಿಗೆ ನೀಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೇನೂ ಅವರು ದೇಶದ ಒಂದೊಂದು ಭಾಗವನ್ನೂ ತೆಗೆದುಕೊಂಡು ಅಲ್ಲಿಗೇನು ಬೇಕು ಇಲ್ಲಿಗೇನು ಬೇಕು ಎಂಬುದಾಗಿ ಸಲಹೆಗಳನ್ನೇನೂ ನೀಡಿರುವುದಿಲ್ಲ. ಜನರಲ್ ಸರ್ವೆ ಮಾಡಿ ಆ ಬಗ್ಗೆ ಸೂಕ್ತ ಮಾರ್ಗಗಳನ್ನು ಸೂಚನೆಮಾಡಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಚಾಮರಾಜನಗರ—ಸತ್ಯಮಂಗಲದ ರೈಲ್ವೆ ವಿಚಾರದಲ್ಲೇನು ಆ ಸಮಿತಿಯವರು ಸಲಹೆ ಮಾಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಮುದ್ದುರಾಮಯ್ಯ.—ತುಮಕೂರು ಜಿಲ್ಲೆಯಲ್ಲಿ ಈ ಕ್ಷಾಮ ನಿವಾರಣೆಯಾಗತಕ್ಕಂಥ ಕಾರ್ಯಗಳನ್ನೇನಾದರೂ ಸರ್ಕಾರದವರು ನಡೆಸಿಲ್ಲ ಎಂದು ಹೇಳಿದರೆ ಅದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಮುದ್ದುರಾಮಯ್ಯ.—ಹಾಗಾದರೆ ತಾವು ಅಲ್ಲಿ ಏನೇನು ಅಂಥಾ ಕಾರ್ಯಕ್ರಮಗಳನ್ನು ನಡೆಸಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರಿಗೇ ಗೊತ್ತಿರುವ ಹಾಗೆ ಅನೇಕ ಕೆರೆಗಳ ಜೀರ್ಣೋದ್ಧಾರ ಕಾರ್ಯಗಳನ್ನು ಕೈಗೊಂಡಿದ್ದೇವೆ. ಅನೇಕ ಲಘ್ವ ಇರಿಗೇಷನ್ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದೇವೆ.